> ಸ್ತ್ರೀವಾದಿ ಜ್ಞಾನಮೀಮಾಂಸೆಯ ಮೊದಲ ಪಾಠವೇ ಮೊದಲಿಗೆ ಪ್ರಶ್ನಿಸಬೇಕಾದದ್ದು ಗಂಡಸನ್ನಲ್ಲ, ಪಿತೃಪ್ರಧಾನತೆಯ ಮೌಲ್ಯಗಳನ್ನ, ಅವು ಸಾಂಸ್ಥೀಕರಣಗೊಳ್ಳುವ ವಿಧಾನವನ್ನ. ಈ ಮೌಲ್ಯಗಳು ಸಾಂಸ್ಥಿಕರೂಪ ಪಡೆದುಕೊಳ್ಳುವುದೇ ಜ್ಞಾನವಲಯಗಳ ಮೂಲಕ. ಜ್ಞಾನವಲಯಗಳು ವ್ಯವಸ್ಥೆಗೊಂದು ಸಾಂಸ್ಥಿಕ ರೂಪ ಕೊಡುತ್ತವೆ. ಈ ಸಂಸ್ಥೆಗಳು ಮೌಲ್ಯಗಳನ್ನು ಆಚರಣೆಗೆ ತರುತ್ತವೆ. ಈ ಪ್ರಕ್ರಿಯೆಗೆ ಗಂಡು ಹೆಣ್ಣು ಇಬ್ಬರನ್ನೂ ಉಪಕರಣಗಳಾಗಿ ಬಳಸುತ್ತದೆ. ನಾವ್ಯಾರೂ ಕೂಡ ಸ್ವತಂತ್ರವಾಗಿ ಚಿಂತಿಸುವ, ಕೆಲಸ ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ. ಸಾಮಾಜಿಕ ಚೌಕಟ್ಟಿನಲ್ಲಿ ವಾಸಿಸುವಾಗ ಸ್ವತಂತ್ರ ವ್ಯಕ್ತಿತ್ವ ಅನ್ನುವುದು ಸೀಮಿತವಾದದ್ದು. ಈ ವ್ಯವಸ್ಥೆ ನಮ್ಮೊಳಗೆ ತುಂಬಿರುವುದನ್ನು ಅಳಿಸುವುದು ಸುಲಭವಲ್ಲ.

◆ **ಸ್ತ್ರೀವಾದದ ಅಧ್ಯಯನದಿಂದ ಸಾಹಿತ್ಯದ ಗ್ರಹಿಕೆ ಬದಲಾದದ್ದು...**

ಸ್ತ್ರೀವಾದ ಕಲಿಯಲು ಆರಂಭಿಸಿದ ಮೇಲೆ ಬದುಕು ಚಿಕ್ಕಂದಿನಿಂದಲೂ ಹುಟ್ಟು ಹಾಕಿದ್ದ ಪ್ರಶ್ನೆಗಳು ಸ್ಪಷ್ಟಗೊಳ್ಳುತ್ತಿವೆ. ಉತ್ತರಗಳ ಸಾಧ್ಯತೆಗಳನ್ನು ಹುಡುಕುವಂತೆ ಮಾಡಿದೆ. ಈಗ ಸಾಹಿತ್ಯವನ್ನು ಸಾಹಿತ್ಯಕೇಂದ್ರಿತ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು ಓದಲಾರೆ. ಸಾಹಿತ್ಯದವರು ಸ್ತ್ರೀವಾದಿ ಅಧ್ಯಯನ ಮಾಡೋದಿಕ್ಕೂ ಸ್ತ್ರೀವಾದಿಗಳು ಸಾಹಿತ್ಯದ ಅಧ್ಯಯನ ಮಾಡುವುದಕ್ಕೂ ವ್ಯತ್ಯಾಸವಿದೆ.

ಸ್ತ್ರೀವಾದದ ಸಿದ್ಧಾಂತಗಳನ್ನು ಅರ್ಥಮಾಡಿಕೊಳ್ಳೋದಕ್ಕೆ ವಿಶ್ಲೇಷಿಸೋದಿಕ್ಕೆ ಬೇಕಾದ ಹಾಗೆ ಸಾಹಿತ್ಯವನ್ನೂ ಬಳಸ್ತಿನಿ. ಅರ್ಥಶಾಸ್ತ್ರವನ್ನು ಬಳಸ್ತಿನಿ ಪ್ರತಿಯೊಂದು ಜ್ಞಾನಶಿಸ್ತನ್ನು ಬಳಸ್ತಿನಿ. ಸಾಹಿತ್ಯ ನನ್ನ ಮುಖ್ಯ ಆಸಕ್ತಿ ಅಲ್ಲ. ಸಾಹಿತ್ಯದವರು ತಮ್ಮ ಚೌಕಟ್ಟಿನಲ್ಲಿ ಬೇರೆ ಶಿಸ್ತುಗಳನ್ನು ಅಧ್ಯಯನ ಮಾಡ್ತಾರೆ. ಹಾಗೆ ಅಧ್ಯಯನ ಮಾಡಲು ಸ್ತ್ರೀವಾದವೂ ಒಂದು. ಅವರಿಗೆ ಸ್ತ್ರೀವಾದಿ ಜ್ಞಾನಮೀಮಾಂಸೆ ಮುಖ್ಯವಲ್ಲ. ಅವರ ಆಸಕ್ತಿ ಇರೋದು ಹೆಣ್ಣಿನ ಚಿತ್ರಣ ಹೇಗಿದೆ ಎನ್ನುವುದರಲ್ಲಿ. ನನಗೆ ಸಾಹಿತ್ಯದ ಅಧ್ಯಯನ ಅನ್ನುವುದು ಸೆಕೆಂಡರಿ. ಉದಾಹರಣೆಗೆ ಕೆಟ್‌ಮಿಲೆಟ್ **sexual politics** ಅನ್ನುವ ಸಿದ್ಧಾಂತವನ್ನು ರೂಪಿಸುವಾಗ ವಿಶ್ಲೇಷಣೆಗೆ ಸಾಹಿತ್ಯವನ್ನು ಬಳಸುತ್ತಾಳೆ. ಅದರ ಆಧಾರದ ಮೇಲೆ ಹೇಗೆ ಪಿತೃಪ್ರಧಾನ ತಂತ್ರಗಳು **sexual politics** ನಡೆಸುತ್ತೆ? ಅದರಲ್ಲಿ ಹೇಗೆ ಯಜಮಾನಿಕೆ ಅಧೀನತೆಗಳು ನಿರ್ಮಾಣಗೊಳ್ಳುತ್ತೆ ಅನ್ನೊದನ್ನ ವಿವರಿಸುತ್ತಾಳೆ. ಈ ತರಹದ ವಿಶ್ಲೇಷಣೆಗೆ ಸಾಹಿತ್ಯ ಬೇಕು. ಇದಕ್ಕೆ ಜನಪ್ರಿಯ ಸಾಹಿತ್ಯದಲ್ಲಾದರೂ ಗಂಭೀರ ಸಾಹಿತ್ಯದಲ್ಲಾದರೂ ಬದುಕನ್ನು ಹೇಗೆ ನೋಡಲಾಗುತ್ತಿದೆ ಎನ್ನುವುದೇ ನನಗೆ ಮುಖ್ಯ. ಬರಿಯ ಸಾಹಿತ್ಯದ ವಿದ್ಯಾರ್ಥಿಯಾಗಿ ಅದನ್ನು ಗಮನಿಸುವ ಚೌಕಟ್ಟುಗಳಿಂದ ಆಚೆ ಬಂದುಬಿಟ್ಟಿದಿನಿ. ಸಾಹಿತ್ಯ ಕೃತಿಯೊಂದರಲ್ಲಿ ನಮ್ಮ ಬದುಕು ಹೇಗೆ ಪ್ರತಿನಿಧಿತವಾಗಿದೆ. ಪುರುಷ ರಚನೆಯನ್ನು ಪ್ರತಿನಿಧಿಕರಣ ಮಾಡ್ತಿದೆಯೋ ಅಥ್ವಾ ಪರ್ಯಾಯ ಲೋಕವೊಂದನ್ನು ಕಟ್ಟಿಕೊಡ್ತಿದಿಯೋ ಎನ್ನುವುದನ್ನು ಗಮನಿಸುವುದರಲ್ಲಿ ನನಗೆ ಆಸಕ್ತಿ. ಲೋಕದೃಷ್ಟಿ ಒಬ್ಬರದಾಗಿರುವುದಿಲ್ಲ. ಇಡೀ ಸಮಾಜವನ್ನು ಕೇಂದ್ರದಲ್ಲಿಟ್ಟುಕೊಂಡು ಬದುಕನ್ನು ಹೇಗೆ ಕಟ್ಟಿಕೊಡುತ್ತೆ ಅನ್ನುವುದನ್ನು ನೋಡುವುದು ಮುಖ್ಯ ಅನ್ನಿಸಿತು.

ಸಾಹಿತ್ಯ ಅನ್ನುವುದೊಂದು ಪ್ರಖರವಾದ ಉಪಕರಣ. ಅದು ಬದುಕನ್ನು ಕಾಣಿಸುತ್ತೆ ಅಂದಾಗ